ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ. ಸಿ. ಸಂಖ್ಯೆ 1488/25**

ಪಿಡಬ್ಲ್ಯು – 1

ದಿನಾಂಕಃ12.06.2026ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀಮತಿ ಟಿ ಡಿ ಪಿ ರವರಿಂದಃ-

ಸಾಲ ಪಡೆದುಕೊಳ್ಳುವ 15 ದಿನಗಳ ಹಿಂದೆ ಆರೋಪಿ ನನ್ನ ಬಳಿ ಬಂದು ಸಾಲ ಕೇಳಿದ್ದರು. ಈ ವಿಚಾರವನ್ನು ನಾನು ನನ್ನ ಫಿರ್ಯಾದಿನಲ್ಲಿ, ನೋಟಿಸ್ ನಲ್ಲಿ, ಮುಖ್ಯ ವಿಚಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ. ನಾನು ನನ್ನ ಖಾತೆ ಇರುವ ಕೆನರಾ ಬ್ಯಾಂಕ್, ಮಡಿಕೇರಿ ಮುಖ್ಯ ಶಾಖೆಯ ಬ್ಯಾಂಕಿನಿಂದ ರೂ.3 ಲಕ್ಷ ಹಣ ತೆಗೆದು ಆರೋಪಿಗೆ ನೀಡಿರುತ್ತೇನೆ. ಆರೋಪಿಗೆ ಸಾಲ ಕೊಡುವ ಸುಮಾರು ಒಂದು ತಿಂಗಳ ಮುಂಚೆ ನಾನು ರೂ.3 ಲಕ್ಷ ಹಣವನ್ನು ಡ್ರಾ ಮಾಡಿಕೊಂಡಿದ್ದೆ ಹಾಗೂ ಅದನ್ನು ನಾನು ನನ್ನ ಮನೆಯಲ್ಲಿ ಇಟ್ಟುಕೊಂಡಿದ್ದೆ. ಆರೋಪಿಗೆ ಸಾಲ ಕೊಟ್ಟ ಬಾಬ್ತು ನಾನು ಅವರಿಂದ ಯಾವುದೇ ಅಗ್ರಿಮೆಂಟ್ ಮಾಡಿಕೊಂಡಿಲ್ಲ, ಆದರೆ ಆರೋಪಿಯಿಂದ ಚೆಕ್ ಪಡೆದುಕೊಂಡಿರುತ್ತೇನೆ. ಆರೋಪಿಯೇ ಸಾಲ ಪಡೆದುಕೊಳ್ಳುವ ದಿನಕ್ಕೆ ಚೆಕ್ ತೆಗೆದುಕೊಂಡು ಬರುವುದಾಗಿ ಹೇಳಿದ್ದರು. ನಾನು ಸದರಿ ಸಾಲವನ್ನು ಬಡ್ಡಿಗಾಗಿ ಕೊಟ್ಟಿಲ್ಲ, ಆರೋಪಿಯನ್ನು ನಾನು ಬಡ್ಡಿ ಕೂಡ ಕೇಳಿಲ್ಲ. ನಾನು ಬಹಳಷ್ಟು ಜನಕ್ಕೆ ಬಡ್ಡಿಗೆ ಸಾಲ ಕೊಡುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಾಲ ಕೊಡುವಾಗ ಬೇರೆ ಯಾರೂ ಸಾಕ್ಷಿಗಳು ಇರಲಿಲ್ಲ, ನಾನು ಚೆಕ್ಕನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆಯನ್ನು ಆರೋಪಿಯಿಂದ ಪಡೆದುಕೊಂಡಿಲ್ಲ. ನಾನು ರೂ.500/- ಮುಖ ಬೆಲೆಯ ನೋಟುಗಳಲ್ಲಿ ಸದರಿ ಸಾಲ ನೀಡಿದ್ದೇನೆ. ಆರೋಪಿ ತನಗೆ ರೂ.5 ಲಕ್ಷ ಸಾಲ ಬೇಕು ಎಂದು ನನಗೆ ಕೇಳಿದ್ದರು. ನನಗೆ ಅಷ್ಟು ಹಣ ಕೊಡಲು ಆಗುವುದಿಲ್ಲ ರೂ.3 ಲಕ್ಷ ಮಾತ್ರ ಕೊಡಬಲ್ಲೆ ಎಂದು ಆರೊಪಿಗೆ ತಿಳಿಸಿದೆ.

ಆರೋಪಿಯೇ ಚೆಕ್ಕಿನಲ್ಲಿ ರೂ.3 ಲಕ್ಷ ಹಣದ ಮೊತ್ತವನ್ನು ಬರೆದು ತಂದಿದ್ದರು. ನಾನು 10 ನೇ ತರಗತಿಯವರೆಗೆ ಓದಿದ್ದೇನೆ . ನನಗೆ ಚೆಕ್‌ಗಳನ್ನು ನೋಡಿ ಅಭ್ಯಾಸ ಇದೆ. ನನ್ನ ಸಂಬಳ ಖಾತೆಗೆ ನನ್ನ ಖಾತೆಗೆ ಜಮೆ ಆಗುತ್ತದೆ ಎಂದರೆ ಸರಿ. ನನಗೆ ಬ್ಯಾಂಕಿನ ವ್ಯವಹಾರ ಚೆನ್ನಾಗಿ ಗೊತ್ತಿದೆ ಎಂದರೆ ಸರಿ. ರೂ.20,000/- ಕ್ಕಿಂತ ಹೆಚ್ಚಿನ ಹಣವನ್ನು ಚೆಕ್ ಮೂಲಕ ನೀಡಬೇಕು ಎಂದು ನಿಯಮ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸರ್ಕಾರಿ ಸಂಬಳ ಪಡೆದುಕೊಳ್ಳುವುದರಿಂದ ಅದರಲ್ಲಿ ಆದಾಯ ತೆರಿಗೆ ಕಡಿತ ಆಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಖಾಯ ನೌಕರಳಲ್ಲ ಎನ್ನುತ್ತಾರೆ. ನನ್ನ ಬ್ಯಾಂಕ್ ಸ್ಟೇಟ್ಮೆಂಟನಲ್ಲಿ ನನ್ನ ಎಲ್ಲಾ ಹಣದ ವ್ಯವಹಾರಗಳು ಗೊತ್ತಾಗುತ್ತದೆ ಎಂದರೆ ಸರಿ. ಚೆಕ್ಕಿನಲ್ಲಿ ಬರವಣಿಗೆಯನ್ನು ನೀಲಿ ಬಣ್ಣದ ಶಾಹಿಯಲ್ಲಿ ಬರೆಯಲಾಗಿದೆ. ಆರೋಪಿ ಸಹಿ ಕೂಡ ನೀಲಿ ಬಣ್ಣದ ಶಾಹಿಯಲ್ಲೇ ಬರೆಯಲಾಗಿದೆ. ನಿಪಿ-1 ಚೆಕ್ಕಿನಲ್ಲಿ ನನ್ನ ಹೆಸರು ಮತ್ತು ರೂ. 3 ಲಕ್ಷ ಹಣವನ್ನು ತಿಕ್ ಇಂಕಿನಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನನ್ನ ಹೆಸರು ಹಾಗೂ ಹಣದ ಮೊತ್ತವನ್ನು ತಿಕ್ ಇಂಕ್ ನಲ್ಲಿದ್ದು ಹಾಗೂ ಆರೋಪಿಯ ಸಹಿ ಲೈಟ್ ಇಂಕಿನಲ್ಲಿ ಬರೆದಿದ್ದರೂ ಕೂಡ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಿಪಿ-1 ರಲ್ಲಿ ಸಹಿ ಮಾತ್ರ ಮಾಡಿದ್ದು, ಉಳಿದ ಒಕ್ಕಣಿಕೆಗಳನ್ನು ನಾನೇ ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕನ್ನು hand writing expert opinion ಗೆ ಕಳುಹಿಸಲು ನನ್ನದೇನೂ ಅಭ್ಯಂತರ ಇಲ್ಲ. ಆರೋಪಿಯೇ ಚೆಕ್ಕನ್ನು ಬರೆದುಕೊಂಡು ಬಂದು ನನಗೆ ನೀಡಿದರು, ಆರೋಪಿ ನನ್ನ ಮುಂದೆ ಚೆಕ್ಕನ್ನು ಬರೆದಿಲ್ಲ, ನಾನು ಆರೋಪಿಗೆ ನನ್ನ ಮುಂದೆ ಚೆಕ್ಕನ್ನು ಬರೆದುಕೊಡಿ ಎಂದು ನಾನು ಹೇಳಿಲ್ಲ. ಆರೋಪಿ ಹಣ ಮರುಪಾವತಿ ಮಾಡದೆ ಮೋಸ ಮಾಡುತ್ತಾರೆ ಎನ್ನುವ ಕಾಲಕ್ಕೆ ನೀವು ನಿಪಿ-1 ಚೆಕ್ಕನ್ನು ಭದ್ರತೆಗೆಂದು ಪಡೆದುಕೊಂಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆರೋಪಿ ತಾನು ಸಾಲವನ್ನು 15 ದಿನಗಳ ನಂತರ ಮರುಪಾವತಿ ಮಾಡುತ್ತೇನೆ, ಅಲ್ಲಿಯವರೆಗೂ ನಿಪಿ-1 ಚೆಕ್ಕನ್ನು ಇಟ್ಟುಕೋ ಎಂದು ಹೇಳಿದ್ದರು. ಆರೋಪಿ ಹೇಳಿದಂತೆ 15 ದಿನಗಳಲ್ಲಿ ಸಾಲವನ್ನು ಮರುಪಾವತಿ ಮಾಡಲಿಲ್ಲ. ಆರೋಪಿ ಸಾಲ ತೀರಿಸಲು 15 ದಿನ ಸಮಯವಾಕಾಶ ಕೇಳಿದ್ದಕ್ಕೆ ನಾನು ಒಪ್ಪಿದ್ದೆ. ದಿಃ 10.03.2025 ನನಗೆ ಆರೋಪಿ ನಿಪಿ-1 ಚೆಕ್ಕನ್ನು ನೀಡಿದ್ದರು. 15 ದಿನ ಆದ ನಂತರ ಅನೇ ಬಾರಿ ಫೋನ್ ಮಾಡಿದರೂ ಕೂಡ ಆರೋಪಿ ಫೋನ್ ತೆಗೆಯಲಿಲ್ಲ.

(ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಮಡಿಕೇರಿ.